# ಧರ್ಮಾಚರಣೆಯ ರಹಸ್ಯ

## ಪ್ರಾತಃ ಸ್ಮರಣೀಯ
## ಶ್ರೀ ವಿದ್ಯಾಮಾನ್ಯ ತೀರ್ಥರು

## ಗಾಯತ್ರಿಯ ಮಹತ್ವ

ಸಂಧ್ಯಾವಂದನೆಯ ಮತ್ತೊಂದು ಮುಖ್ಯ ವಿಷಯವೆಂದರೆ ಗಾಯತ್ರೀ ಜಪ. ಸೂರ್ಯನಿಗೆ ಅಭಿಮುಖವಾಗಿಯೇ ಗಾಯತ್ರೀ ಜಪವನ್ನು ಮಾಡಬೇಕು. ಸೂರ್ಯೋದಯವಾಗುವವರೆಗೂ ನಿಂತೇ ಜಪ ಮಾಡಬೇಕು. ನಂತರ ಕುಳಿತೂ ಮಾಡಬಹುದು. ಸಹಸ್ರ ಗಾಯತ್ರೀಜಪವನ್ನು ಮಾಡವುದು ಉತ್ತಮ. ನೂರು ಮಾಡುವುದು ಮಧ್ಯಮ. ಹತ್ತು ಮಾಡುವುದು ಅಧಮ. ಅದಕ್ಕಿಂತ ಕಡಿಮೆ ಜಪವನ್ನು ಮಾಡಬಾರದು. ಗಾಯತ್ರೀಮಂತ್ರದ ಮೂರರಷ್ಟು ಅಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ಗಾಯತ್ರೀಮಂತ್ರವು ಮೂರು ಪಾದಗಳಿಂದ ಕೂಡಿದೆ. ಈ ಮೂರು ಪಾದಗಳಿಂದಲೇ ಮೂರು ವೇದಗಳೂ ಈ ಮೂರುಪಾದಗಳ ವ್ಯಾಖ್ಯಾನರೂಪವಾಗಿ ಹೊರಟಿವೆ. ಆದ್ದರಿಂದಲೇ ಗಾಯತ್ರಿಗೆ ವೇದಮಾತೆ ಎಂದು ಹೆಸರು. ಈ ಮಂತ್ರೋಚ್ಚಾರಣದಿಂದ ಸಮಸ್ತ ವೇದಗಳನ್ನು ಪಠನಮಾಡಿದ ಫಲವು ಬರುತ್ತದೆ. ಅರ್ಥಾನುಸಂಧಾನದಿಂದ ಸಮಸ್ತ ವೇದಗಳಿಂದುಂಟಾಗುವ ಫಲವೇ ಬರುತ್ತದೆ. ಈ ರಹಸ್ಯವನ್ನು ತಿಳಿದ ಯಾರು ತಾನೇ ಗಾಯತ್ರೀ ಜಪವನ್ನು ಬಿಟ್ಟಾರು ?

ಗಾಯತ್ರೀಪ್ರತಿಪಾದ್ಯನು ಸಾಕ್ಷಾತ್ ಶ್ರೀಮನ್ನಾರಾಯಣನೇ. ಈ ಮಂತ್ರವು ಪರಮಾತ್ಮನಿಗೆ ಅನಂತಗುಣ ಪೂರ್ಣತ್ವವನ್ನೂ, ನಿರ್ದೋಷತ್ವವನ್ನೂ ಹೇಳುತ್ತದೆ. ಗಾಯತ್ರೀ ಮಂತ್ರದಲ್ಲಿ ಸವಿತೃ ಶಬ್ದವಿದೆ. ಅದಕ್ಕೆ ನಾರಾಯಣನೆಂದರ್ಥ. ಏಕೆಂದರೆ, ಇಂದ್ರದ್ಯುಮ್ನ ಶಾಖೆಯಲ್ಲಿ 'ಏಷ ಉ ಏವ ಬ್ರಹ್ಮ ಏಷ ಉ ಏವ ಸವಿತಾ' ಎಂಬುದಾಗಿ ನಾರಾಯಣನೇ ಸವಿತೃ ಎಂದು ಹೇಳಿದೆ. ಗಾಯತ್ರೀ ಮಂತ್ರದಲ್ಲಿ ದೇವಸ್ಯ ಎಂಬ ಶಬ್ದವಿದೆ. ಅದಕ್ಕೆ ಜಗತ್ತನ್ನು ಸೃಷ್ಟಿ ಮಾಡುವುದು ನಾರಾಯಣನಿಗೆ ಒಂದು ಕ್ರೀಡೆಯೆಂದರ್ಥ. ಲೋಕದಲ್ಲಿ ಹೇಗೆ

ಕ್ರೀಡೆಗೆ ಬೇರೇ ಪ್ರಯೋಜನದ ಉದ್ದೇಶವಿರುವುದಿಲ್ಲವೋ ಹಾಗೆಯೇ ಪರಮಾತ್ಮನ ಸೃಷ್ಟಿ ಮುಂತಾದ ಕ್ರೀಡೆಗೆ ಒಂದು ಪ್ರಯೋಜನವಿಲ್ಲವಾದ ಕಾರಣ ಪರಮಾತ್ಮನು ಆಪ್ತ ಕಾಮನೆಂದಾಯಿತು. ಆಪ್ತ ಕಾಮನಾದುದರಿಂದಲೇ ಪರಮಾತ್ಮನು ನಿರ್ದೋಷನೆಂದೂ ಸಿದ್ಧವಾಯಿತು. ಏಕೆಂದರೆ, ಗೀತೆಯಲ್ಲಿ ಅರ್ಜುನನು 'ಅಥ ಕೇನಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ' – 'ಜೀವನು ಏಕೆ ಪಾಪವನ್ನಾಚರಿಸುತ್ತಾನೆ' ಎಂಬ ಪ್ರಶ್ನೆಗೆ ಭಗವಾನ್ ಶ್ರೀಕೃಷ್ಣನು 'ಕಾಮ ಏಷ ಕ್ರೋಧ ಏಷಃ ' 'ಕಾಮದಿಂದಲೇ ಸಮಸ್ತ ಪಾಪಗಳನ್ನು ಮಾಡುತ್ತಾನೆ' ಎಂದು ಹೇಳಿದ್ದಾನೆ.

ನಾರಾಯಣನ ಸರ್ವೋತ್ತಮತ್ವವನ್ನು ಈ ಮಂತ್ರವು ಹೇಳುತ್ತದೆ. ಏಕೆಂದರೆ ಗಾಯತ್ರೀ ಜಪವಾದ ನಂತರ ದಿಗುಪಸ್ಥಾನವನ್ನು ಮಾಡುತ್ತೇವೆ. ದಿಗುಪಸ್ಥಾನವೆಂದರೆ ದಿಗಭಿಮಾನಿಗಳಾದ ಬ್ರಹ್ಮ, ರುದ್ರ, ಶೇಷ, ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ವಾಯು, ಸೋಮ ಈ ದೇವತೆಗಳ ನಮಸ್ಕಾರವೆಂದರ್ಥ. ಈ ಗುಂಪಿನಲ್ಲಿ ನಾರಾಯಣನು ಬ್ರಹ್ಮಾದಿಗಳಂತೆ ಖಂಡಾಧಿಪತಿಯಲ್ಲ. ಅವನು ಅಖಂಡಾಧಿಪತಿ. ಆದುದರಿಂದಲೇ ಬ್ರಹ್ಮಾದಿಗಳಿಗೆ ನಮಸ್ಕಾರ ಮಾಡುವ ಪೂರ್ವದಲ್ಲಿ ಗಾಯತ್ರೀ ಮಂತ್ರದಿಂದ ಪರಮಾತ್ಮನ ನಿರ್ದೋಷತ್ವ ಮತ್ತು ಅನಂತಗುಣಗಳನ್ನು ಗಾನಮಾಡುತ್ತೇವೇ. ಹೀಗೆ ಒಪ್ಪದಿದ್ದರೆ ಸಂಧ್ಯಾವಂದನೆಯಲ್ಲಿ ಎಲ್ಲ ದೇವತೆಗಳಿಗೂ ನಮಸ್ಕಾರವಿದೆ. ಪರಮಾತ್ಮನಿಗೆ ಮಾತ್ರ ಏತಕ್ಕೆ ಇಲ್ಲ? ಎಂಬ ಆಕ್ಷೇಪಕ್ಕೆ ಸಮಾಧಾನ ಹೇಳುವುದು ಸಾಧ್ಯವಿಲ್ಲ. ಅಂತೂ ಸಂಧ್ಯಾವಂದನೆ ಮಾಡತಕ್ಕ ಎಲ್ಲ ಮತಸ್ಥರೂ ವಿಷ್ಣುಸರ್ವೋತ್ತಮತ್ವವನ್ನು ಒಪ್ಪಲೇಬೇಕು. ಭಾಗವತವು ಗಾಯತ್ರಿಯ ವ್ಯಾಖ್ಯಾನರೂಪವೆಂದು 'ಗಾಯತ್ರೀಭಾಷ್ಯರೂಪೋಽಸೌ' ಎಂಬಲ್ಲಿ ಹೇಳಿದೆ. ಇದನ್ನು ಸೂಚಿಸುವುದಕ್ಕಾಗಿಯೇ ಭಾಗವತದ ಪ್ರಥಮ ಶ್ಲೋಕದಲ್ಲಿ 'ಸತ್ಯಂ ಪರಂ ಧೀಮಹಿ' ಎಂದು ಗಾಯತ್ರಿಯಲ್ಲಿರುವ ಧೀಮಹಿ ಎಂಬ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಭಾಗವತವೆಲ್ಲವೂ ವಿಷ್ಣುಸರ್ವೋತ್ತಮತ್ವವನ್ನೇ ಪ್ರತಿಪಾದಿಸುವುದರಿಂದ ಗಾಯತ್ರಿಯೂ ವಿಷ್ಣುಸರ್ವೋತ್ತಮತ್ವನ್ನೇ ಪ್ರತಿಪಾದಿಸುತ್ತದೆಂದು ಒಪ್ಪಬೇಕು.

ಗಾಯತ್ರಿಮಂತ್ರದಲ್ಲಿ ನಮ್ಮ ಮತದ ಮುಖ್ಯ ಪ್ರಮೇಯವಾದ ಪಂಚಭೇದವನ್ನು ಹೇಳಿದೆ. ಹೇಗೆಂದರೆ, ನಾರಾಯಣನು ನಮ್ಮೆಲ್ಲರ ಬುದ್ಧಿಪ್ರೇರಕನೆಂದು ಗಾಯತ್ರಿ ಮಂತ್ರದಲ್ಲಿ ಹೇಳಿದೆ. ನಾವು ಎಂದರೆ ಚೇತನರು. ಬುದ್ಧಿ ಜಡವಸ್ತು. ಜೀವನ ಬುದ್ಧಿಗೆ ಪರಮಾತ್ಮನು ಪ್ರೇರಕನೆಂದು ಹೇಳಿದ್ದರಿಂದ ಜೀವೇಶ್ವರ ಭೇದ ಮತ್ತು ಜಡೇಶ್ವರ ಭೇದವು ಸಿದ್ಧವಾಯಿತು. 'ನಃ' ಎಂದು ಬಹುವಚನ ಮಾಡಿರುವದರಿಂದ ಚೇತನಗಳಲ್ಲಿ ಭೇದವಿದೆಯೆಂದು ಸಿದ್ಧವಾಯಿತು. 'ಧಿಯಃ' ಎಂದು ಬಹುವಚನ ಪ್ರಯೋಗ ಮಾಡಿರುವದರಿಂದ ಜಡಗಳಲ್ಲಿ ಪರಸ್ಪರ ಭೇದವಿದೆಯೆಂದು ಸಿದ್ಧವಾಯಿತು. 'ನಃ ಧಿಯಃ' ನಮ್ಮೆಲ್ಲರ ಬುದ್ಧಿ ಎಂದು ಹೇಳಿದ್ದರಿಂದ ಜೀವ ಜಡಗಳಿಗೆ ಭೇದ ಸಿದ್ಧವಾಯಿತು.

'ಪ್ರಚೋದಯಾತ್' ಎಂಬಲ್ಲಿ ಪ್ರಶಬ್ದದಿಂದ ಕೆಲವರಿಗೆ ಪ್ರಚೋದಕತ್ವ ಮತ್ತೆ ಕೆಲವರಿಗೆ ಚೋದಕತ್ವ ಮಾತ್ರವೆಂದು ಸಿದ್ಧವಾಯಿತು. ಆದ್ದರಿಂದ ಬುದ್ಧಿ ಪ್ರೇರಣೆಯಲ್ಲಿ ನಾನಾವಿಧವಿರುವದರಿಂದ ಪರಮಾತ್ಮನು ಉತ್ತಮ ಪ್ರೇರಣೆಯನ್ನು ಮಾಡಿ ಉತ್ತಮ ಜ್ಞಾನಿಗಳನ್ನಾಗಿಯೂ ಸಾಮಾನ್ಯ ಪ್ರೇರಣೆಯನ್ನು ಮಾಡಿ ಸಾಮಾನ್ಯ ಜ್ಞಾನಿಗಳನ್ನಾಗಿಯೂ ಮಾಡುವನೆಂದು ಸಿದ್ಧವಾಯಿತು. ನಿರ್ದೋಷಿಯಾದ ಪರಮಾತ್ಮನು ಪಕ್ಷಪಾತ ಮಾಡಲು ಸಾಧ್ಯವಿಲ್ಲವಾದ ಕಾರಣ ಈ ಬುದ್ಧಿ ಪ್ರೇರಣೆಯ ವೈಚಿತ್ರ್ಯಕ್ಕೆ ಜೀವಿಯ ಅನಾದಿ ಸ್ವರೂಪ ಯೋಗ್ಯತೆ ಹೊರತು ಬೇರೆ ಕಾರಣವಿಲ್ಲವೆಂದು ಸಿದ್ಧವಾಗುತ್ತದೆ. ಆದ್ದರಿಂದ ಜೀವರಲ್ಲಿ ಸ್ವಾಭಾವಿಕ ತಾರತಮ್ಯವಿದೆ ಎಂದು ಸಿದ್ಧವಾಗುತ್ತದೆ.

ಪರಮಾತ್ಮನಲ್ಲಿ 'ಸವಿತೃ' ಶಬ್ದ ಪ್ರಯೋಗ ಮಾಡಿರುವದರಿಂದ ಪ್ರಪಂಚದ ಸತ್ಯತ್ವವು ಸಿದ್ಧವಾಗುತ್ತದೆ. 'ಷೂಞ್ ಪ್ರಾಣಿ ಪ್ರಸವೆ' ಎಂಬ ಧಾತುವಿನಿಂದ 'ಸವಿತೃ' ಶಬ್ದವು ನಿಷ್ಪನ್ನವಾಗುತ್ತದೆ. ಆದ್ದರಿಂದ ಪರಮಾತ್ಮನು ಸಮಸ್ತ ಪ್ರಾಣಿಗಳನ್ನು ಪ್ರಳಯಕಾಲದಲ್ಲಿ ತನ್ನ ಉದರದಲ್ಲಿಟ್ಟುಕೊಂಡು ಸೃಷ್ಟಿ ಕಾಲದಲ್ಲಿ ಪ್ರಸವಿಸುತ್ತಾನೆಂದು ಅರ್ಥವಾಗುತ್ತದೆ. ಆದ್ದರಿಂದ ಹಗ್ಗವು ಸರ್ಪಭ್ರಮಕ್ಕೆ ಅಧಿಷ್ಠಾನವಾಗುವಂತೆ ಬ್ರಹ್ಮನು ಪ್ರಪಂಚಭ್ರಮಕ್ಕೆ ಅಧಿಷ್ಠಾನ ಎಂಬ ಅದ್ವೈತಿಗಳ ಪ್ರತಿಕ್ರಿಯೆಯು ಅಪ್ರಾಮಾಣಿಕವೆಂದು ಗೊತ್ತಾಗುತ್ತದೆ. ಹಗ್ಗವು ಸರ್ಪವನ್ನು ಪ್ರಸವಿಸುತ್ತದೆಂಬ ವ್ಯವಹಾರವಿಲ್ಲ. ಅದು ಇದ್ದಿದ್ದರೆ ಆ ಸರ್ಪದಂತೆ ಪ್ರಪಂಚವು ಮಿಥ್ಯೆಯೆಂದು ಅಂಗೀಕರಿಸಬಹುದಾಗಿದ್ದಿತು. ಆದ್ದರಿಂದ ಪರಮಾತ್ಮ ಸ್ಪಷ್ಟವಾದ ಜೀವಜಡಾತ್ಮಕ ಸಮಸ್ತ ಪ್ರಪಂಚವೂ ಸತ್ಯವೆಂದು ಸಿದ್ಧವಾಗುತ್ತದೆ.

'ವರೇಣ್ಯಂ' ಎಂದರೆ ಉತ್ತಮವಾದ ಜ್ಞಾನಾನಂದ ಸ್ವರೂಪನು ಪರಮಾತ್ಮ ಎಂದರ್ಥ. ಅಪಕೃಷ್ಟವಾದ ಜ್ಞಾನಾನಂದ ಸ್ವರೂಪರು ಇದ್ದರೆ ಮಾತ್ರ ಪರಮಾತ್ಮನು ಉತ್ಕೃಷ್ಟ ಜ್ಞಾನಾನಂದ ಸ್ವರೂಪನಾಗುವನು. ಆದ್ದರಿಂದಲೇ ಜೀವರು ಅಲ್ಪಜ್ಞಾನಾನಂದ ಸ್ವರೂಪರಾಗಿ ಇದ್ದಾರೆಂದು ಸಿದ್ದವಾಯಿತು. ಸ್ವಸ್ವರೂಪಾಭಿವ್ಯಕ್ತಿಯೇ ಮುಕ್ತಿ ಎಂದು ಎಲ್ಲರೂ ಒಪ್ಪಿದ್ದಾರೆ. ಜೀವನು ಜ್ಞಾನಾನಂದರೂಪನಾದುದರಿಂದ ನೈಜ ಸುಖಾನುಭೂತಿಯೇ ಮುಕ್ತಿ ಎಂದು ಸಿದ್ಧವಾಯಿತು. 'ಭರ್ಗಃ' ಎಂದರೆ 'ಭರಣಗಮನ ಕರ್ತಾ' ಎಂದರ್ಥ. ಎಂದರೆ, ಸಮಸ್ತ ಪ್ರಾಣಿಗಳನ್ನು ಪೋಷಿಸುವವನು ಮತ್ತು ಅವುಗಳ ಚೇಷ್ಟೆಯನ್ನು ಮಾಡಿಸುವವನು ಪರಮಾತ್ಮ ಎಂದು ಸಿದ್ಧವಾಯಿತು. ಪರಮಾತ್ಮ ನಮ್ಮ ಪೋಷಣೆಯನ್ನು ಮಾಡುವುದರಿಂದ ನಾವು ಆತನ ಅನುಚರರೆಂದು ಸಿದ್ಧವಾಯಿತು.

'ಧೀಮಹಿ' ಎಂದು ಪರಮಾತ್ಮನಿಗೆ ಧ್ಯಾನಗೋಚರತ್ವವನ್ನು ಹೇಳಿದೆ. ಧ್ಯಾನವೆಂದರೆ ನಿರಂತರ ಚಿಂತನೆ. ನಿರಂತರ ಚಿಂತನೆಯು ಪರಮದ್ವೇಷದಿಂದಾಗಲೀ ಭಕ್ತಿಯಿಂದಾಗಲೀ ಸಾಧ್ಯ. ಆದರೆ, ಇಲ್ಲಿ ಪರಮಾತ್ಮನನ್ನು ನಿರಂತರವಾಗಿ ಚಿಂತಿಸಬೇಕು ಎಂದು

ಅಭಿಪ್ರಾಯವಾಗುತ್ತದೆ. ಅದೇ ಜೀವರ ಉದ್ಧಾರಕ್ಕೆ ಮಾರ್ಗ ಎಂದು ಸೂಚಿಸಿದಂತಾಯಿತು.

ಆರಂಭದಲ್ಲಿರುವ **'ತತ್'** ಎಂಬ ಪದಕ್ಕೆ ಪರಮಾತ್ಮನು ವ್ಯಾಪ್ತನೆಂದರ್ಥ. ಸರ್ವ ವ್ಯಾಪಕನಾಗಿರುವ ಪರಮಾತ್ಮನು ನಮ್ಮ ಪ್ರತ್ಯಕ್ಷಕ್ಕೆ ಏಕೆ ಗೋಚರವಾಗುವುದಿಲ್ಲವೆಂಬ ಪ್ರಶ್ನೆಗೆ, ಪ್ರತ್ಯಕ್ಷವೊಂದೇ ಪ್ರಮಾಣವಲ್ಲ; ಆಗಮವೂ ಪ್ರಮಾಣ. ಪರಮಾತ್ಮನು ಆಗಮಗಳಿಂದ ಸಿದ್ಧನಾಗುತ್ತಾನೆಂಬುದೇ ಈ ಮಂತ್ರಕ್ಕೆ ಅಭಿಪ್ರೇತ. ಪರಮಾತ್ಮನು ಸರ್ವ ವ್ಯಾಪಕನೂ, ಸೃಷ್ಟಿಕರ್ತನೂ, ಪೂರ್ಣಾನಂದ ಜ್ಞಾನಸ್ವರೂಪನೂ, ಸಮಸ್ತ ಪೋಷಕ ಚೇಷ್ಟಕನೂ, ಕ್ರೀಡಾ ರೂಪನೂ, ಬುದ್ಧಿಪ್ರೇರಕನೂ ಆದ್ದರಿಂದ ಧ್ಯಾನ ಯೋಗ್ಯನೆಂಬ ಒಂದು ಯುಕ್ತಿಯು ಇಲ್ಲಿ ಅಭಿಪ್ರೇತವಾಗಿದೆ. ಆದ್ದರಿಂದ ಅನುಮಾನವೂ ಒಂದು ಪ್ರಮಾಣವೆಂದು ಹೇಳಿದಂತಾಯಿತು. ಮತ್ತು ಎಲ್ಲ ವೇದಗಳಿಗೂ ಗಾಯತ್ರಿಯು ಮೂಲವಾದ ಕಾರಣ ನಾರಾಯಣನೇ ಸಮಸ್ತ ವೇದ ಪ್ರತಿಪಾದ್ಯನೆಂದೂ ಸಿದ್ಧವಾಯಿತು.

ಈ ರೀತಿ ಗಾಯತ್ರಿಯ ಶ್ರೀಮನ್ಮಧ್ವಸಿದ್ಧಾಂತ ಸಾರ ಸರ್ವಸ್ವವನ್ನು ಸ್ಪಷ್ಟವಾಗಿ ತಿಳಿಸುವದರಿಂದ ಗಾಯತ್ರಿಯ ಅರ್ಥವನ್ನು ತಿಳಿದುಕೊಂಡು ಜಪಿಸುವವನೇ ಬ್ರಾಹ್ಮಣನು ಎಂದು ಹೇಳುವುದಕ್ಕೆ ಮಧ್ವಮತಾಭಿಮಾನಿಗಳಿಗೆ ದೊಡ್ಡ ಹೆಮ್ಮೆಯೆನಿಸುತ್ತದೆ.

ಪರಮಾತ್ಮನು ಸಮಸ್ತ ದಿಕ್ಕುಗಳಲ್ಲಿಯೂ ವ್ಯಾಪಿಸಿದ್ದಾನೆಂದೂ, ಆಯಾ ದಿಕ್ಕುಗಳಲ್ಲಿ ಆಯಾ ದಿಗಭಿಮಾನಿ ದೇವತೆಗಳಿದ್ದಾರೆಂದೂ ನಮ್ಮ ಸಮಸ್ತ ಕರ್ಮಗಳಿಗೂ ಸಾಕ್ಷಿಯಾಗಿದ್ದಾರೆಂದೂ, ಗಾಯತ್ರಿಯ ಅರ್ಥಾನುಸಂಧಾನ ಮಾಡಿ ದೃಢತರ ಸಂಸ್ಕಾರವನ್ನು ಬೆಳೆಸಿಕೊಂಡವನು ಎಲ್ಲಿಯೂ ಅಕೃತ್ಯವನ್ನುಂಟುಮಾಡಲು ಹಿಂಜರಿಯುತ್ತಾನೆ. ಲಂಚ ರುಷುವತ್ತುಗಳನ್ನು ನಿರೋಧಿಸಬೇಕೆಂದು ಕೂಗಾಡುತ್ತಿರುವ ಸರಕಾರವೂ ಸಹ ತನ್ನ ಉದ್ದೇಶ ಸಫಲವಾಗಬೇಕಾದರೆ ಧರ್ಮಪ್ರಚಾರ ಕೈಕೊಂಡಲ್ಲದೆ ಬೇರೆ ಯಾವ ಉಪಾಯಗಳಿಂದ ಸಾಧ್ಯವಿಲ್ಲ. ಬೇರೆ ಉಪಾಯಗಳಿಂದಲೂ ಸಾಧ್ಯವಿಲ್ಲವೆಂಬ ಅಂಶವು ನಮ್ಮೆಲ್ಲರ ಅನುಭವದಿಂದ, ವಿಶ್ವದಲ್ಲಿ ನಡೆಯುತ್ತಿರುವ ಘಟನೆಗಳಿಂದ, ದೃಢವಾಗುತ್ತಿದೆ. ಆದ್ದರಿಂದ ಈಗಲಾದರೂ ಬುದ್ಧಿ ಪಡೆದು ಸರಕಾರವು ತನ್ನ ಧ್ಯೇಯ ಧೋರಣೆಗಳ ಸಾಧನೆಯ ಉಪಾಯವಾಗಿ ಧರ್ಮಪ್ರಚಾರವನ್ನು ಬಹಳ ಹೆಚ್ಚಿಸಿ, ಜಗತ್ತಿಗೇ ಕಲ್ಯಾಣವನ್ನುಂಟು ಮಾಡಲೆಂದು ಆಶಿಸುತ್ತೇವೆ.